

ಮಲಯಾಳಂ ಮೂಲ: ಸಂತೋಷ್ ಏಚ್ಚಿಕ್ಕಾನಂ
ಕನ್ನಡಕ್ಕೆ: ಕೆ.ಕೆ. ಗಂಗಾಧರನ್

# ಕಲಶ

ಜಾನಕಿ ಬಾವಿಯಿಂದ ನೀರು ಸೇದುವಾಗ ಗಂಡನ ಆಗಮನವಾಯಿತು. ಎತ್ತಿ ಕಟ್ಟಿದ ಮುಂಡು, ಕೈಯಲ್ಲಿ ಏನೋ ಒಂದು ಕಾಗದದ ಪೊಟ್ಟಣ. ಬಾಲನ್ ಪಣಿಕ್ಕರ್ ನಿಂತಲ್ಲಿಯೇ ಕಂಪಿಸಿದರು. ಬಾವಿಕಟ್ಟೆಯತ್ತ ಕಾಗೆಯಂತೆ ಒಮ್ಮೆ ಬಾಗಿ ನೋಡಿದರು. ಜಾನಕಿ ಕಂಡರೂ ಕಾಣದಂತೆ ನಟಿಸಿದಳು. ಬಟ್ಟೆಸಾಬೂನು ತರುವುದಕ್ಕೆಂದು ಬೆಳಿಗ್ಗೆ ಹೋಗಿದ್ದವರು ಪಣಿಕ್ಕರ್; ಈಗ ಗಂಟೆ ಹನ್ನೆರಡು.

ಬಾವಿಯ ನೀರಿನಲ್ಲಿ ಸೂರ್ಯ ದುತ್ತನೆ ಕಾಣಿಸುತ್ತಿದ್ದ. ಜಾನಕಿ ಬಿಂದಿಗೆಯನ್ನು ಬಾವಿಗಿಳಿಸಿ ಅತ್ತಿಂದಿತ್ತ ಸರಿದಾಡಿಸಿ ಸೂರ್ಯನನ್ನೇ ಗೋರಿ ತೆಗೆದಳು. ಸೂರ್ಯನ ಬೆಳಕು ಬಿದ್ದ ನೀರಿನಲ್ಲಿ 'ತೆಯ್ಯಂ'ನ (ಭೂತಾರಾಧನೆ) ಎಲ್ಲಾ ಪರಿಕರಗಳನ್ನು ಒಗೆದು ಒಣಗಿಸಬೇಕು.

ಮನ್ನಂಪುರಂ ಬನದ ಕಲಶಕ್ಕೆ ಮಳೆ ಸುರಿಯುತ್ತದೆ. ಅದರೊಂದಿಗೆ ಸಕಲ 'ಪಳ್ಳಿಯರ'ಗಳ (ದೇವರ ಆವಾಸಸ್ಥಾನ) 'ತಾನಂ'ಗಳ (ಕೋಲ ಕಟ್ಟಿ ಆಡುವ ಸ್ಥಳ) ಬಾಗಿಲು ಮುಚ್ಚಲ್ಪಡುತ್ತವೆ. ಆದರೆ ಬಾಲನ್ ಪಣಿಕ್ಕರ್‌ಗೆ ಎಲ್ಲಕ್ಕೂ ಮೊದಲೇ ವೇಷ ಕಳಚಬಹುದು. ಮಾಡತ್ತಿಂಗೀಳಿನ ಊಪನಚ್ಚಿ, ಪಾಯಂನ ಗುಳಿಗನ ವೇಷ ಮುಗಿಸಿದರೆ, ಪಣಿಕ್ಕರ್ ಗಗ್ಗರ, ಕಂಕಣಗಳನ್ನು ಕೆಂಬಟ್ಟೆಯಲ್ಲಿ ಸುತ್ತಿ ತಂದು ಜಾನಕಿಗೆ ವಹಿಸುತ್ತಾರೆ.